

# ಇದು ಸಾಧನೆಯ ಬಗ್ಗೆ ಚಿಂತಿಸುವ ಸಮಯವಲ್ಲ

ಕನ್ನಡದ ಬೇಡಿಕೆಯ ನಟಿಯರಲ್ಲೊಬ್ಬರಾದ ಅಮೃತಾ ಅಯ್ಯಂಗಾರ್ ಅವರಿಗೆ ಹೀರೊಯಿನ್ ಎಂದು ಗುರ್ತಿಸಿಕೊಳ್ಳುವುದಕ್ಕಿಂತ ಪಾತ್ರದ ಮೂಲಕ ಗುರ್ತಿಸಿಕೊಳ್ಳುವ ಹಂಬಲ.

■ **ಪದ್ಮನಾಭ ಭಟ್**

‘ಈ ಸಮಯದಲ್ಲಿ ಮನೆಯಲ್ಲೇ ಇರುವುದು ಬೋರ್ ಅಂತ ಹೇಳುವುದು ಕೂಡ ಅಮಾನವೀಯ ಅನಿಸುತ್ತದೆ ನನಗೆ’ ಎಂದು ಹೇಳಿ ಒಂದು ಸುದೀರ್ಘ ನಿಟ್ಟುಸಿರು ಬಿಟ್ಟರು ಅಮೃತಾ ಅಯ್ಯಂಗಾರ್.

ತುಸು ಮೌನಕ್ಕೆ ಜಾರಿ ತಮ್ಮ ಮಾತನ್ನು ಇನ್ನಷ್ಟು ವಿಸ್ತರಿಸುತ್ತ ಮಾತಿಗೆ ಮರಳಿದರು. ‘ನಮ್ಮ ಸುತ್ತಲಿನ ಜಗತ್ತು ತುಂಬ ಸಂಕಷ್ಟದಲ್ಲಿದೆ. ನಮಗೆ ಬೋರ್ ಆಗಿ ಕೂಡಲಿಕ್ಕಾದರೂ ಒಂದು ಮನೆ ಇದೆ. ಆರೋಗ್ಯವಿದೆ. ಆದರೆ ಹೊರಗಡೆ ಜನರು ಸಾವು ಬದುಕಿನ ಮಧ್ಯ ಹೋರಾಡುತ್ತಿದ್ದಾರೆ. ಒಂದು ಹೊತ್ತಿನ ಊಟಕ್ಕೆ ಇಲ್ಲದೆ ಪರದಾಡುತ್ತಿದ್ದಾರೆ. ಆಸ್ಪತ್ರೆಗಳು ತುಂಬಿವೆ. ಜನರು ದಿಕ್ಕೆಟ್ಟಿದ್ದಾರೆ. ಇಂಥ ಸಮಯದಲ್ಲಿ ಮನೆಯಲ್ಲಿಯೇ ಕುಳಿತುಕೊಳ್ಳುವುದು ಬೋರ್ ಅಂತ ಹೇಳುವುದು ಎಷ್ಟು ಸರಿ ನೀವೇ ಹೇಳಿ’ ಎನ್ನುವುದು ಅವರ ಪ್ರಶ್ನೆ.

‘ಸುತ್ತಲಿನ ಸಮಾಜ ಇಷ್ಟೆಲ್ಲ ಸಂಕಷ್ಟದಲ್ಲಿದ್ದರೂ ನನಗೆ ಏನೂ ಮಾಡಲು ಸಾಧ್ಯವಾಗುತ್ತಿಲ್ಲ ಎಂಬ ಅಸಹಾಯಕತೆ ಕಾಡುತ್ತಿದೆ. ನನ್ನ ಕೆಲಸವೂ ನಿಂತುಹೋಗಿದೆ. ಆದರೆ ಎಲ್ಲ ಸರಿಹೋಗುವವರೆಗೆ ಸರ್ವೈವ್ ಆಗುವಷ್ಟು ಶಕ್ತಿ ನನಗಿದೆ. ತುಂಬ ಜನರಿಗೆ ಅದೂ ಇಲ್ಲವಲ್ಲ’ ಎನ್ನುತ್ತಲೇ ಸಿನಿಮಾಗಳ ಕುರಿತು ಮಾತು ಹೊರಳಿಸಿದರು ಅಮೃತಾ.

ಸದ್ಯಕ್ಕೆ ಅಮೃತಾ ಅಭಿನಯದ ಮೂರು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ. ‘ವಿಂಡೊ ಸೀಟ್’, ‘ಬಡವ ರ್‍ಯಾಸ್ಕಲ್’, ‘ಫ್ಯಾಮಿಲಿ ಪ್ಯಾಕ್’ ಈ ಮೂರೂ ಸಿನಿಮಾಗಳಲ್ಲಿ ಅವರು ಮೂರು ಭಿನ್ನ ಪಾತ್ರಗಳಲ್ಲಿ ನಟಿಸಿದ್ದಾರೆ. ‘ಫ್ಯಾಮಿಲಿ ಪ್ಯಾಕ್’ ಸಿನಿಮಾದ ತುಣುಕು ಚಿತ್ರೀಕರಣ ಇನ್ನೂ ಬಾಕಿ ಇದೆ. ಉಳಿದೆರಡು ಸಿನಿಮಾಗಳು ಪೂರ್ತಿಯಾಗಿ